## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 15-08-2022

**ಧನ್ನೂರಾ ಪೊಲೀಸ್ ಠಾಣೆ ಯು.ಡಿ.ಆರ್ ಸಂಖ್ಯೆ: 08/2022 ಕಲಂ. 174 ಸಿಆರ್‌ಪಿಸಿ :-**

ದಿನಾಂಕ: 14/08/2022 ರಂದು ಮುಂಜಾನೆ 8:00 ಗಂಟೆ ಸುಮಾರಿಗೆ ಫಿರ್ಯಾದಿ ಶ್ರೀ ಬಾಲರಾಜ ತಂದೆ ಬಂಡೆಪ್ಪಾ ಬಾಪುನೊರ ವಯ: 40 ವರ್ಷ ಜಾತಿ: ಪರಿಶಿಷ್ಟ ಜಾತಿ ಉ: ಕೂಲಿ ಕೆಲಸ ಸಾ: ಹಾಲಹಳ್ಳಿ[ಕೆ] ಇವರು ಕೊಟ್ಟ ದೂರಿನ ಸಾರಾಂಶವೆನೆಂದರೆ ನಾನು ನನ್ನ ತಾಯಿ ಸೈದಮ್ಮಾ ಜೊತೆಯಲ್ಲಿ ಹೊಲದಲ್ಲಿ ಬೇಳೆಗೆ ಔಷದಿ ಹೊಡೆಯುವಗೊಸ್ಕರ ನಮ್ಮ ಹೊಲಕ್ಕೆ ಹೊಗುತ್ತಿರುವಾಗ ನನ್ನ ಮಗ ಧಮ್ಮ ರಕ್ಷಿತ ಶಾಲೆ ರಜೆ ಇದ್ದರಿಂದ ನಮ್ಮ ಜೊತೆಯಲ್ಲಿಯೆ ನಮ್ಮ ಹೊಲಕ್ಕೆ ಬಂದಿರುತ್ತಾನೆ. ನಂತರ ನಮ್ಮ ಹೊಲದಲ್ಲಿ ನಾನು ಮತ್ತು ನನ್ನ ತಾಯಿ ಬೆಳೆಗೆ ಔಷದಿ ಹೊಡೆಯುತ್ತಿರುವಾಗ ನನ್ನ ಮಗ ಧಮ್ಮ ರಕ್ಷಿತ ಒಂದು ಬೆಳೆಯ ಸಾಲದಲ್ಲಿ ನಿಂತಿರುತ್ತಾನೆ. ನಂತರ ಅಂದಾಜು 9:00 ಗಂಟೆ ಸುಮಾರಿಗೆ ನನ್ನ ಮಗನ ಹತ್ತಿರ ಒಂದು ದೊಡ್ಡ ಕರಿ ನಾಗರ ಹಾವು ಬಂದಿರುತ್ತದೆ. ಆ ಹಾವನ್ನು ಕಂಡು ನನ್ನ ಮಗ ಘಾಬರಿಗೊಂಡು ಆ ಹಾವಿನ ಮೆಲೆ ಬಿದ್ದಿರುತ್ತಾನೆ. ಆ ಹಾವು ನನ್ನ ಮಗನ ಎಡಗೈ ಮೊಳಗೈ ಮೆಲೆ ಕಚ್ಚಿರುತ್ತದೆ. ಆದ್ದರಿಂದ ನನ್ನ ಮಗನ ಬಾಯಿಂದ ಮುಗಿನಿಂದ ಬೂರುಗು ಬಂದಿರುತ್ತದೆ. ತಕ್ಷಣ ನಾನು ಮತ್ತು ನನ್ನ ತಾಯಿ ಹಾಗು ನಮ್ಮೂರಿನ ಜನರು ಕೂಡಿಕೊಂಡು ನನ್ನ ಮಗನಿಗೆ ಎತ್ತಿಕೊಂಡು ಒಂದು ಖಾಸಗಿ ವಾಹನ ಕರೆಯಿಸಿ ಅದರಲ್ಲಿ ನನ್ನ ಮಗನಿಗೆ ಹಾಕಿಕೊಂಡು ಚಿಕಿತ್ಸೆ ಕುರಿತು ಬೀದರ ಸರ್ಕಾರಿ ಆಸ್ಪತ್ರೆಗೆ ಬರುತ್ತಿರುವಾಗ ದಾರಿಯಲ್ಲಿ ಮೃತ್ತ ಪಟ್ಟಿರುತ್ತಾನೆ. ನನ್ನ ಮಗ ಮೃತ್ತಪಟ್ಟ ಬಗ್ಗೆ ಯಾರ ಮೆಲೆ ಯಾವುದೆ ರೀತಿಯ ಸಂಶಯ ಇರುವುದಿಲ್ಲ. ನನ್ನ ಮಗನಿಗೆ ಹಾವು ಕಚ್ಚಿದರಿಂದ ಮೃತ ಪಟ್ಟಿದ್ದು ಇರುತ್ತದೆ ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಲ್ಲಲಾಗಿದೆ.

**ಭಾಲ್ಕಿ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 131/2022 ಕಲಂ. 279, 337, 338 ಐಪಿಸಿ :-**

ದಿನಾಂಕ 14/08/2022 ರಂದು ಮುಂಜಾನೆ 09:15 ಗಂಟೆಯ ಸುಮಾರಿಗೆ ಫಿರ್ಯಾದಿ ರವಿಂದ್ರಕುಮಾರ ತಂದೆ ಶ್ರೀಪತಿ ಗೋಖಲೆ ವಯ:48 ಜಾತಿ- ಎಸ್ ಸಿ ಹೊಲೆಯಾ ಸಾ; ಹಳೆ ಭೀಮನಗರ ಭಾಲ್ಕಿ ಇವರು ಇವರು ಕೊಟ್ಟ ಫಿಯರ್ಯಾದು ಸಾರಾಂಶವೆನೆಂದರೆ ನಾನು ಮನೆಯಲ್ಲಿದ್ದಾಗ ನನ್ನ ಮಗ ವೀನಿತ ಈತನು ನನಗೆ ತಿಳಿಸಿದ್ದೇನೆಂದೆ, ನಾನು ಆರ್.ಟಿ.ಓ. ಕಛೇರಿಯ ಹತ್ತಿರ ನನ್ನ ಗೆಳಿಯನ ಮನೆಗೆ ಹೋಗಿ ನೊಟ್ಸ ತೆಗೆದುಕೊಂಡು ಬರುತ್ತೇನೆ ಅಂತ ಹೇಳಿ ಮನೆಯಿಂದ ಸೈಕಲ ನಡೆಸುತ್ತಾ ಹೋದನು. ನಂತರ 09;35 ಗಂಟೆಯ ಸುಮಾರಿಗೆ ನಾನು ಮನೆಯಲ್ಲಿದ್ದಾಗ ನನಗೆ ನಮ್ಮ ಪರಿಚಯ ಹುಡುಗ ರಾಕೇಶ ಬಿರಾದಾರ ಇವನು ನನಗೆ ಫೋನ ಮಾಡಿ ತಿಳಿಸಿದ್ದೇನೆಂದರೆ, ನಾನು ಮತ್ತು ನನ್ನ ಗೆಳಿಯಾ ಮಹ್ಮದ ಕೈಫ ರವರು ನಿರ್ಮಲಾ ಕಾಲೇಜ ಹತ್ತಿರ ಇರುವ ಸ್ವಾಮಿ ಹೊಟಲ ಮುಂದೆ ಚಹಾ ಕುಡಿಯುತ್ತಾ ನಿಂತಾಗ ನಿಮ್ಮ ಮಗ ವಿನೀತ ಇವನು ಸೈಕಲ ಮೇಲೆ ಕಾಲೇಜ ಕಡೆಗೆ ಹೋಗುತ್ತಿರುವಾಗ ನಿರ್ಮಲಾ ಕಾಲೇಜ ಹತ್ತಿರ 0930 ಗಂಟೆಗೆ ಎದುರುಗಡೆಯಿಂದ ಒಬ್ಬ ಮೋಟಾರ ಸೈಕಲ್ ಚಾಲಕನು ತನ್ನ ಮೋಟಾರ ಸೈಕಲ್ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ನಿಮ್ಮ ಮಗನಿಗೆ ಡಿಕ್ಕಿ ಮಾಡಿ ಅವನು ಸಹ ಮೋಟಾರ ಸೈಕಲ ಸಮೇತ ಬಿದ್ದಿರುತ್ತಾನೆ. ನಾವು ನೋಡಿ ಅವರ ಹತ್ತಿರ ಹೋಗಿ ನೋಡಲು ವೀನಿತ ಇವನಿಗೆ ತಲೆಯ ಬಲಭಾಗದಲ್ಲಿ ಭಾರಿ ರಕ್ತಗಾಯವಾಗಿರುತ್ತದೆ. ಮೋಟಾರ ಸೈಕಲ್ ಸಂ. ಕೆಎ-32/ಇಡಬ್ಲೂ- 4219ನೇದ್ದು ಇರುತ್ತದೆ. ಮತ್ತು ಅಪಘಾತ ಮಾಡಿದ ಹುಡುಗನ ಹೆಸರು ಅಖಿಲೇಶ ತಂದೆ ರಮೇಶ ಗ್ರಾಮ ಖಾನಾಪೂರ ತಾ; ತಾಲೂಕಾ ಚಿಂಚೋಳಿ ಅಂತ ಗೋತ್ತಾಗಿರುತ್ತದೆ. ಅವನಿಗೆ ಸಹ ದವಡಿಗೆ ತರಚೀತ ರಕ್ತಗಾಯ, ತಲೆಗೆ ಗುಪ್ತಗಾಯವಾಗಿರುತ್ತದೆ. ಇವರಿಬ್ಬರಿಗೆ ಚಿಕಿತ್ಸೆ ಕುರಿತು ಒಂದು ಆಟೋದಲ್ಲಿ ಭಾಲ್ಕಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬರುತಿದ್ದೇವೆ ನೀವು ಆಸ್ಪತ್ರೆಗೆ ಬರ್ರಿ ಅಂತ ಹೇಳಿದ್ದರಿಂದ ತಕ್ಷಣ ನಾನು ಆಸ್ಪತ್ರೆಗೆ ಹೋಗಿ ನೋಡಲ ನನ್ನ ಮಗನಿಗೆ ಮತ್ತು ಅಪಘಾತ ಮಾಡಿದ ಹುಡುಗನಿಗೆ ಈ ಮೇಲೆ ಹಿಳಿದಂತೆ ಗಾಯಗಳು ಆಗಿದ್ದು ನೋಡಿರುತ್ತೇನೆ. ನಂತರ ವೈಧ್ಯಾಧಿಕಾರಿಯವರು ನನ್ನ ಮಗನಿಗೆ ಹೆಚ್ಚಿನ ಚಿಕಿತ್ಸೆ ಬೀದರ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದರಿಂದ ತಕ್ಷಣ ನಾನು ಅಂಬುಲೇನ್ಸನಲ್ಲಿ ನನ್ನ ಮಗನಿಗೆ ಕರೆದುಕೊಂಡು ಬಂದು ಬೀದರ ಯೇಶು ಸಾಯಿ ಆಸ್ಪತ್ರೆಯಲ್ಲಿ ಸೇರಿಕ ಮಾಡಿರುತ್ತೇನೆ. ಕಾರಣ ನನ್ನ ಮಗ ವಿನೀತ ಇವನಿಗೆ ಅಪಾಘತ ಮಾಡಿದ ಮೋಟಾರ ಸೈಕಲ್ ನಂ. ಕೆಎ-32/ಇಡಬ್ಲೂ- 4219 ನೇದ್ದರ ಚಾಲಕ ಅಖಿಲೇಶ ತಂದೆ ರಮೇಶ ಗ್ರಾಮ ಖಾನಾಪೂರ ತಾ; ತಾಲೂಕಾ ಚಿಂಚೋಳಿ ಇವನ ಮೇಲೆ ಕಾನೂನು ಕ್ರಮ ಕೈಕೊಳ್ಳಲು ವಿನಂತಿ ಇರುತ್ತದೆ ಅಂತ ಕೊಟ್ಟ ಪಿರ್ಯಾದು ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಭಾಲ್ಕಿ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 131/2022 ಕಲಂ. 279, 337, 338 ಐಪಿಸಿ :-**

ದಿನಾಂಕ 14/08/2022 ರಂದು 1800 ಗಂಟೆಗೆ ಶ್ರೀ ರಾಜಕುಮಾರ ತಂದೆ ಪ್ರಭುಶೇಟ್ಟಿ ರುಮ್ಮಾ ಸಾ; ಕಲವಾಡಿ ತಾ; ಭಾಲ್ಕಿ ರವರು ಠಾಣೆಗೆ ಹಾಜರಾಗಿ ಅರ್ಜಿ ಸಲ್ಲಿಸಿದ್ದು ಸಾರಾಂಶವೇನೆಂದರೆ, ದಿನಾಂಕ 19/07/2022 ರಂದು ರಾತ್ರಿ 9 ಗಂಟೆಯ ಸುಮಾರಿಗೆ ನಾನು ಮನೆಯಲ್ಲಿದ್ದಾಗ ನನ್ನ ಮಗ ಪವನ ವಯಸ್ಸು 27 ವರ್ಷ ಮತ್ತು ನಮ್ಮೂರ ನಮ್ಮ ಸಂಬಂಧಿ ವಿರೇಶ ತಂದೆ ರಮೇಶ ರವರು ನನಗೆ ತಿಳಿಸಿದ್ದೇನೆಂದರೆ, ಭಾಲ್ಕಿಯಲ್ಲಿ ನಮ್ಮ ಕೆಲಸ ಇದೆ ನಾವು ಇಬ್ಬರು ಭಾಲ್ಕಿಗೆ ಹೋಗಿ ಬರುತ್ತೇವೆ ಅಂತ ಹೇಳಿ ಮೋಟಾರ ಸೈಕಲ್ ನಂ. ಕೆಎ-39/ಎಲ್-7614 ನೇದ್ದರ ಮೇಲೆ ಕುಳಿತು ಮೋಟಾರ ಸೈಕಲ ನನ್ನ ಮಗ ಪವನ ಈತನು ಚಲಾಯಿಸುತ್ತಾ

ನಮ್ಮೂರದಿಂದ ಹೋದರು. ನಂತರ ರಾತ್ರಿ 11;35 ಗಂಟೆಯ ಸುಮಾರಿಗೆ ನಾನು ನಮ್ಮ ಮನೆಯಲ್ಲಿದ್ದಾಗ ನನ್ನ ಇನ್ನೊಬ್ಬ ಮಗ ಪ್ರಭುಲಿಂಗ ಈತನು ನನಗೆ ಫೋನ ಮಾಡಿ ತಿಳಿಸಿದ್ದೇನೆಂದರೆ, ನಾನು ನನ್ನ ಮೋಟಾರ ಸೈಕಲ್ ಮೇಲೆ ಭಾಲ್ಕಿ ದಿಂದ ನಮ್ಮೂರಿಗೆ ಬರುವಾಗ ನನ್ನ ಮುಂದೆ ಅಣ್ಣಾ ಪವನ ಮತ್ತು ವಿರೇಶ ರವರು ಮೋಟಾರ ಸೈಕಲ್ ನಂ. ಕೆಎ-39/ಎಲ್-7614 ನೇದ್ದರ ಮೇಲೆ ಕುಳಿತು ಮೋಟಾರ ಸೈಕಲ ಅಣ್ಣಾ ಪವನ ಇವನು ಚಲಾಯಿಸುತ್ತಾ ಭಾಲ್ಕಿ ದಿಂದ ನಮ್ಮೂರಿಗೆ ಬರುವಾಗ ಅಣ್ಣಾ ಪವನ ಈತನು ಮೋಟಾರ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಹೋಗುವಾಗ ಭಾಲ್ಕಿ- ಹುಮನಾಬಾದ ರೋಡಿನ ಮೇಲೆ ಚಿಕ್ಕಲಚಾಂದಾ ಕ್ರಾಸ್ ಹತ್ತಿರ ರಾತ್ರಿ 11;30 ಗಂಟೆಯ ಸುಮಾರಿಗೆ ಮೋಟಾರ ಸೈಕಲ್ ಒಮ್ಮೇಲೆ ಸ್ಕೀಡ ಆಗಿ ರೋಡಿನ ಮೇಲೆ ಬಿದಿದ್ದರಿಂದ ಅವರ ಹತ್ತಿರ ಹೋಗಿ ನೋಡಲು ಅಣ್ಣಾ ಪವನ ಇವನಿಗೆ ಹಣೆಯ ಮೇಲೆ ರಕ್ತಗಾಯ, ಮುಖಕ್ಕೆ ಭಾರಿ ಪೆಟ್ಟಾಗಿ ಹಲ್ಲು ಬಿದ್ದಿರುತ್ತವೆ. ಮತ್ತು ಮೋಟಾರ ಸೈಕಲ್ ಮೇಲೆ ಹಿಂದೆ ಕುಳಿತಿದ್ದ ವಿರೇಶ ಇವನಿಗೆ ಬಲ ಕಣ್ಣಿನ ಹುಬ್ಬಿನ ಮೇಲೆ ರಕ್ತಗಾಯ, ಮುಖಕ್ಕೆ ಭಾರಿ ಪೆಟ್ಟಾಗಿ ಹಲ್ಲು ಬಿದ್ದಿರುತ್ತವೆ. ನೀವು ತಕ್ಷಣ ಬರ್ರಿ ನಾನು ಅಂಬುಲೇನ್ಸಗೆ ಫೋನ ಮಾಡಿರುತ್ತೇನೆ ಅಂತ ಹೇಳಿದ್ದರಿಂದ ತಕ್ಷಣ ನಾನು ಮತ್ತು ನನ್ನ ಮಗ ಆಕಾಶ ರವರು ಕೂಡಿ ಮೋಟಾರ ಸೈಕಲ್ ಮೇಲೆ ಘಟನೆ ಸ್ಥಳಕ್ಕೆ ಬಂದು ನೋಡುತ್ತಿರುವಾಗ ಅದೇ ವೇಳೆಗೆ 108 ಅಂಬುಲೇನ್ಸ ಬಂದಿದ್ದರಿಂದ ಗಾಯಗೊಂಡ ನನ್ನ ಮಗ ಪವನ ಮತ್ತು ವಿರೇಶ ಇವರಿಗೆ ಚಿಕಿತ್ಸೆ ಕುರಿತು ನಾನು ಮತ್ತು ನನ್ನ ಮಕ್ಕಳಾದ ಪ್ರಭುಲಿಂಗ ಮತ್ತು ಆಕಾಶ ರವರು ಕೂಡಿ ಅಂಬುಲೇನ್ಸದಲ್ಲಿ ಕುಡಿಸಿ ಭಾಲ್ಕಿ ಸರಕಾರಿ ಆಸ್ಪತ್ರೆಗೆ ತಂದು ಸೇರಿಸಿದ್ದು ಹೆಚ್ಚಿನ ಚಿಕಿತ್ಸೆ ಕುರಿತು ಬಿದರ ಆಸ್ಪತ್ರೆಯಲ್ಲಿ ಸೇರಿಸಿಸಲಾಗಿದೆ. ಅಂತ ಕೊಟ್ಟ ಫಿರ್ಯಾದು ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ

**ಹೊಕ್ರಾಣಾ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 50/2022 ಕಲಂ. 87 ಕರ್ನಾಟಕ ಪಲೀಸ್ ಕಾಯ್ದೆ :-**

ದಿನಾಂಕ 14/08/2022 ರಂದು ಮಧ್ಯಾಹ್ನ 1400 ಗಂಟೆಗೆ ಪಿಎಸ್ಐ ರವರು ಪೊಲೀಸ ಠಾಣೆಯಲ್ಲಿದ್ದಾಗ ಬಾತ್ಮೀ ಬಂದಿದೆನೆಂದರೆ ಸಾವರಗಾಂವ ಗ್ರಾಮದ ಶಿವಾರದಲ್ಲಿರುವ ಜ್ಞಾನೋಬಾ ತಂದೆ ಕುಶಲರಾವ ಬೊಡ್ಕೆ ರವರ ಹೊಲದ ಹತ್ತಿರ ಲಕ್ಷ್ಮೀ ಮಂದಿರ ಎದುರುಗಡೆ ಸಾರ್ವಜನೀಕ ಸ್ಥಳದಲ್ಲಿ ಕೇಲವು ಜನರು ಹಣವನ್ನು ಪಣಕ್ಕೆ ಹಚ್ಚಿ ಅಂದರ ಬಾಹರ ಎಂಬ ನಸೀಬಿನ ಇಸ್ಪಿಟ್ ಜೂಜಾಟ ಆಡುತ್ತಿದ್ದಾರೆಂದು ಖಚಿತ ಮಾಹಿತಿ ಬಂದ ಮೇರೆಗೆ ದಾಳಿ ಮಾಡಲು ಸಿಬ್ಬಂದಿ ಹಾಗೂ ಪಂಚರೊಂದಿಗೆ ಸಾವರಗಾಂವ ಶಿವಾರದಲ್ಲಿರುವ ಜ್ಞಾನೋಬಾ ಬೊಡಕೆ ರವರ ಹೊಲದ ಹತ್ತಿರ ಹೋಗಿ 1545 ಗಂಟೆಗೆ ಲಕ್ಷ್ಮೀ ಮಂದಿರ ಹಿಂದುಗಡೆ ಮರೆಯಾಗಿ ನಿಂತು ನೊಡಲು ಲಕ್ಷ್ಮೀ ಮಂದಿರದ ಎದುರುಗಡೆ ಸಾರ್ವಜನೀಕ ಸ್ಥಳದಲ್ಲಿ 8 ಜನರು ಗೋಲಾಕಾರವಾಗಿ ಕುಳಿತು ಹಣವನ್ನು ಪಣಕ್ಕೆ ಹಚ್ಚಿ ಅಂದರ ಬಾಹರ ಎಂಬ ನಸೀಬಿನ ಇಸ್ಪಿಟ್ ಜೂಜಾಟ ಆಡುತ್ತಿರುವುದು ನೊಡಿ ಖಚಿತ ಪಡಿಸಿಕೊಂಡು ಒಮ್ಮೇಲೆ ದಾಳಿ ಮಾಡಿ ಇಸ್ಪಿಟ್ ಜೂಜಾಟ ಆಡುತ್ತಿರುವವರಿಗೆ ಯಥಾ ಸ್ಥಿತಿಯಲ್ಲಿರುವಂತೆ ಸೂಚಿಸಿ ಒಬ್ಬೊಬ್ಬರ ಹೆಸರು ವಿಚಾರಿಸಲಾಗಿ. 1) ರವಿಕಾಂತ ತಂದೆ ಗೋವಿಂದ ಹನುಚೆ ವಯ 38 ವರ್ಷ ಜಾತಿ ಹಟಕರ ಉ; ಕೂಲಿ ಕೆಲಸ ಸಾ; ಸಾವರಗಾಂವ ಈತನ ಮುಂದೆ ನಗದು ಹಣ 700/- ರೂಪಾಯಿಗಳು 2) ಜ್ಞಾನೋಬಾ ತಂದೆ ನಾಮದೇವ ಬಾಲುಚೆ ವಯ 40 ವರ್ಷ ಜಾತಿ ಹಟಕರ ಉ; ಒಕ್ಕಲುತನ ಸಾ; ಸಾವರಗಾಂವ ಈತನ ಮುಂದೆ ನಗದು ಹಣ 500/- ರೂಪಾಯಿಗಳು 3) ಸಂತೋಷ ತಂದೆ ವಿಲಾಸ ಸೂರನರ ವಯ 31 ವರ್ಷ ಜಾತಿ ಹಟಕರ ಉ; ಪೆಂಟಿಂಗ ಕೆಲಸ ಸಾ; ಸಾವರಗಾಂವ ಈತನ ಮುಂದೆ 450/- ರೂಪಾಯಿಗಳು 4) ದತ್ತಾ ತಂದೆ ಕುಶಾಲ ಬೊಡಕೆ ವಯ 29 ವರ್ಷ ಜಾತಿ ಕೊಳಿ ಉ; ಖಾಸಗಿ ಕೆಲಸ ಸಾ; ಸಾವರಗಾಂವ ಈತನ ಮುಂದೆ ನಗದು ಹಣ 350/- ರೂಪಾಯಿಗಳು 5) ಪಾಂಡುರಂಗ ತಂದೆ ಗಂಗಾರಾಮ ಸಾದುರೆ ವಯ 28 ವರ್ಷ ಜಾತಿ ಕೊಳಿ ಉ; ವ್ಯಾಪಾರ ಸಾ; ಸಾವರಗಾಂವ ಈತನ ಮುಂದೆ ನಗದು ಹಣ 400/- ರೂಪಾಯಿಗಳು 6) ನಾಗನಾಥ ತಂದೆ ಶ್ರೀಪತರಾವ ಕಲಾಟೆ ವಯ 50 ವರ್ಷ ಜಾತಿ ಉಪ್ಪಾರ ಉ; ಒಕ್ಕಲುತನ ಸಾ; ಸಾವರಗಾಂವ ಈತನ ಮುಂದೆ ನಗದು ಹಣ 200/- ರೂಪಾಯಿಗಳು 7) ಜ್ಞಾನೋಬಾ ತಂದೆ ಕುಶಾಲರಾವ ಬೊಡಕೆ ವಯ 32 ವರ್ಷ ಜಾತಿ ಕೊಳಿ ಉ; ಖಾಸಗಿ ಕೆಲಸ ಸಾ; ಸಾವರಗಾಂವ ಈತನ ಮುಂದೆ ನಗದು ಹಣ 450/- ರೂಪಾಯಿಗಳು 8) ಅನೀಲ ತಂದೆ ಶಿವರಾಜ ಗಾಯಕವಾಡ ವಯ 33 ವರ್ಷ ಜಾತಿ ಎಸ್.ಸಿ ಮಾಂಗ ಉ; ಪೆಂಟರ ಕೆಲಸ ಸಾ; ಸಾವರಗಾಂವ ಈತನ ಮುಂದೆ ನಗದು ಹಣ 150/-ರೂಪಾಯಿಗಳು ಅಂತ ತಿಳಿಸಿರುತ್ತಾರೆ. ಎಲ್ಲರ ಮಧ್ಯದಲ್ಲಿ 3390/- ಹಾಗು ಒಟ್ಟು 52 ಇಸ್ಪಿಟ್ ಎಲೆಗಳು ಅವರೆಲ್ಲರಿಗೆ ವಿಚಾರಿಸಲಾಗಿ ತಿಳಿಸಿದೆನೆಂದರೆ ನಾವು 8 ಜನರು ಕೂಡಿಕೊಂಡು ಹಣವನ್ನು ಪಣಕ್ಕೆ ಹಚ್ಚಿ ಅಂದರ ಬಾಹರ ಎಂಬ ನಸೀಬಿನ ಇಸ್ಪೀಟ್ ಜೂಜಾಟ ಆಡುತ್ತಿರುವುದಾಗಿ ತಿಳಿಸಿರುತ್ತಾರೆ. ಸದರಿಯವರ ಹತ್ತಿರ ಸಿಕ್ಕ ಒಟ್ಟು ಹಣ 6590/- ರೂಪಾಯಿಗಳು ಹಾಗು 52 ಇಸ್ಪಿಟ್ ಎಲೆಗಳು ಜಪ್ತಿ ಮಾಡಿ ಆರೋಪಿತರನ್ನು ವಶಕ್ಕೆ ಪಡೆದು ಠಾಣೆಗ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.